ಕನ್ನಡ ಸಂಸ್ಕೃತಿ ಇಲಾಖೆಯಿಂದ ಸುಲಭ ದರದ ಪುಸ್ತಕ ಪ್ರಕಟಣೆ

1037 (1291) ಶ್ರೀ ಸದಾನಂದಗೌಡ ವಿ.ವಿ. (ಪುತ್ತೂರು): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನಪ್ರಿಯ ಸಾಹಿತ್ಯ ಮಾಲೆ ಹಾಗೂ ವಿವಿಧ ಯೋಜನೆಗಳ ಮಹತ್ವದ ಸಾಹಿತ್ಯಕೃತಿ ಪ್ರಕಟಿಸುವ ಕಾರ್ಯ ಯಾವ ಹಂತದಲ್ಲಿದೆ? (ವಿವರ ಒದಗಿಸಿ)

ಆ) ಸದರಿ ಪ್ರಕಟಣೆಗಳ ಕಾರ್ಯ ಸ್ಥಗಿತಗೊಂಡಿರುವುದು ನಿಜವೇ?

ಇ) ಸ್ಥಗಿತಗೊಳ್ಳಲು ಕಾರಣವೇನು? ಹಾಗೂ ಈ ಇಲಾಖೆಯ ಪ್ರಕರಣಾ ವಿಭಾಗದ ಕಾರ್ಯ ವಿಧಾನಗಳೇನು? (ವಿವರ ನೀಡುವುದು)

ಈ) ಇತ್ತೀಚಿನ ಇಲಾಖೆ ಪ್ರಕರಣಾ ಗ್ರಂಥಗಳಾವುವು? ಮತ್ತು ಹಾಲಿ ಪ್ರಕಟಣೆಗಾಗಿ ಸಿದ್ಧತೆಯಲ್ಲಿರುವ ಗ್ರಂಥಗಳಾವುವು? ಹಾಗೂ ಸುಲಭ ದರದ ಪುಸ್ತಕಗಳು ಯಾವುವು?

ಉ) ವಿಳಂಬ ನೀತಿಗೆ ಕಾರಣಗಳೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವರು) :

ಅ) ಮಹತ್ವದ ಸಾಹಿತ್ಯ ಕೃತಿಗಳಾದ ಡಾ: ಅಂಬೇಡ್ಕರ್ ಅವರ ಬರಹಗಳು, ಡಾ:ರಾಮಮನೋಹರ ಲೋಹಿಯಾ ಅವರ ಬರಹಗಳು, ಡಾ: ಶಿವರಾಮಕಾರಂತರ ಸಾಹಿತ್ಯ ಶ್ರೇಣಿ ಸಮಗ್ರ ದಾಸ ಸಾಹಿತ್ಯ ಸಂಪುಟಗಳು ಮುದ್ರಣದ ವಿವಿಧ ಹಂತಗಳಲ್ಲಿವೆ.

ಆ) ಇಲ್ಲ

ಇ) 1) ಸ್ಥಗತಗೊಂಡಿಲ್ಲ

2) ಮಹತ್ವದ ಗ್ರಂಥಗಳನ್ನು ಪ್ರಕಟಿಸಬೇಕೆಂದು ತೀರ್ಮಾನಿಸಿದಾಗ, ತೀರ್ಮಾನಿಸಿದ ಗ್ರಂಥಗಳ ಸಂಪಾದನಾ ಕಾರ್ಯಕ್ಕಾಗಿ ಸಂಪಾದಕ ಮಂಡಳಿಯನ್ನು ರಚಿಸಲಾಗುತ್ತದೆ. ಸಂಬಂಧಪಟ್ಟ ಆಯಾ ಸಂಪಾದಕ ಮಂಡಳಿಯು ಸಂಪಾದಿಸಿ; ಅನುವಾದಿಸಿ ಪರಿಷ್ಕರಿಸಿ ನೀಡಿದ ಗ್ರಂಥಗಳನ್ನು ನಿಯಮಾನುಸಾರ ಮುದ್ರಿಸಲಾಗುತ್ತಿದೆ.

ಈ) ಇತ್ತೀಚೆಗೆ ಪ್ರಕಟವಾಗಿ ಹೊರಬಂದಿರುವ ಗ್ರಂಥಗಳು

1. ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನಿಡಿದ ಕಡಲತೀರದ ಭಾರ್ಗವ ಡಾ:ಶಿವರಾಮ ಕಾರಂತರ ಸಮಗ್ರ ಸಾಹಿತ್ಯ ಮಾಲಿಕೆಯಲ್ಲಿ ಮೊದಲ 9 ಸಂಪುಟಗಳು.
2. ನಿಜಲಿಂಗಪ್ಪನವರ ಜನ್ಮಶಮಾನೋತ್ಸವದ ಅಂಗವಾಗಿ ಹೊರತಂದಿರುವ ಈ ಕೆಳಕಂಡ ಗ್ರಂಥಗಳು

1) ರಾಷ್ಟ್ರಭೂಷಣ (2) ಎ ವಿಷನರಿ ವಿತ್ ಎ ಮಿಷನ್ 3) ಎಸ್.ಎನ್.ಚಿತ್ರ ಸಂಪುಟ

ಆ) ಪ್ರಕಟಣೆಗೆ ಸಿದ್ಧವಿದ್ದು ಮುದ್ರಣ ಹಂತದಲ್ಲಿರುವ ಗ್ರಂಥಗಳು

1) ಡಾ: ಶಿವರಾಮ ಕಾರಂತರ ಸಮಗ್ರ ಸಾಹಿತ್ಯ ಮಾಲಿಕೆಯ ನಾಲ್ಕು ಸಂಪುಟಗಳು.
2) ಡಾ: ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು ಮಾಲಿಕೆಯ 13 ಸಂಪುಟದ ಭಾಗ-1 ಮತ್ತು 14ನೇ ಸಂಪುಟದ ಭಾಗ-2 (2- ಗ್ರಂಥಗಳ)
3) ಡಾ: ರಾಮಾವನೋಹರ ಲೋಹಿಯಾ ಅವರ ಬರಹಗಳು ಮಾಲಿಕೆಯ 6ನೇ ಸಂಪುಟ
4) ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ ಎಲ್ಲ ಹರಿದಾಸರ ಸಮಗ್ರ ದಾಸ ಸಾಹಿತ್ಯ ಮಾಲಿಕೆಯ ಬೃಹತ್ ಯೋಜನೆಯನ್ನು ಕೈಗೊಂಡಿದ್ದು ಈ ಯೋಜನೆಯಡಿ 35 ಸಂಪುಟಗಳು ಮುದ್ರಣದ ವಿವಿಧ ಹಂತದಲ್ಲಿವೆ.

ಇ) ಮೇಲೆ (ಅ)ದಲ್ಲಿ ವಿವರಿಸಿರುವ ಎಲ್ಲ ಗ್ರಂಥಗಳು ಲಾಭನಷ್ಟವಿಲ್ಲದ ಆಧಾರದ ಮೇಲೆ ಅವುಗಳ ಬೆಲೆಯನ್ನು ನಿಗದಿಪಡಿಸಲಾಗಿದೆ.

- ಉದ್ಭವಿಸುವುದಿಲ್ಲ

ರಾಜ್ಯದಲ್ಲಿ ಶಿಕ್ಷಕರ ವೇತನ ಪಾವತಿ ವಿಳಂಬ

1038 (1292) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ಇರುವ ಒಟ್ಟು ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಪಾಠಶಾಲೆಗಳೆಷ್ಟು; ಹಾಗೂ ಸದರಿ ಶಾಲೆಗಳಲ್ಲಿ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಅಧ್ಯಾಪಕರ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಖಾಲಿ ಇರುವ ಒಟ್ಟು ಅಧ್ಯಾಪಕರ ಸಂಖ್ಯೆ ಎಷ್ಟು? ಹಾಗೂ ಯಾವಾಗ ಭರ್ತಿ ಮಾಡಲಾಗುವುದು?

ಇ) ಇವರುಗಳಿಗೆ ವಾರ್ಷಿಕ ಸಂಬಳ ಪಾವತಿಗಾಗಿ ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು?

ಈ) ಸದರಿ ಶಿಕ್ಷಕರುಗಳಿಗೆ ಎಷ್ಟು ತಿಂಗಳಿನಿಂದ ಸಂಬಳ ಪಾವತಿ ಮಾಡದೇ ಬಾಕಿ ಉಳಿಸಿಕೊಳ್ಳಲಾಗಿದೆ; ಯಾವಾಗ ಪಾವತಿಸಲಾಗುವುದು; ಪಾವತಿಸದೇ ಇರಲು ಕಾರಣಗಳೇನು?

ಪ್ರೊ.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗಳು 22342
ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಗಳು 26374
ಒಟ್ಟು ಪ್ರಾಥಮಿಕ ಪಾಠಶಾಲೆಗಳು 48716
ಒಟ್ಟು ಶಿಕ್ಷಕರು 209837

ಆ) ಹಾಲಿ 7811 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಇದರಲ್ಲಿ 2094 ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ್ದು ಇಷ್ಟರಲ್ಲೆ ಅಂತಿಮ ಪಟ್ಟಿ ಇತ್ಯರ್ಥಗೊಳಿಸಲಾಗುವುದು. ಮತ್ತು 717 ವಿಶೇಷ ಶಿಕ್ಷಕರ ನೇಮಕಾತಿ ಬಗ್ಗೆ ಅಧಿಸೂಚನೆ ಹೊರಡಿಸುವ ಹಂತದಲ್ಲಿ ಅಲ್ಲದೆ ಈ ಸಾಲಿನಲ್ಲಿ 5000 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ರೂ.1,16,792,73 ಲಕ್ಷಗಳು

ಈ) ಕೆಲವು ಜಿಲ್ಲೆಗಳಲ್ಲಿ ವೇತನವನ್ನು ತಡವಾಗಿ ಪಾವತಿ ಮಾಡುತ್ತಿರುವುದು ಇಲಾಖೆ ಗಮನಕ್ಕೆ ಬಂದಿರುತ್ತದೆ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಗೂ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ 5ನೇ ತಾರೀಖಿನೊಳಗೆ ಶಿಕ್ಷಕರ ವೇತನ ಅನುದಾನ ಬಡುಗಡೆ ಮಾಡಲು ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಒಳಗೊಂಡ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಆದಾಗ್ಯೂ ಈ ಬಗ್ಗೆ ಶೈಕ್ಷಣಿಕ ಜಿಲ್ಲಾ ಉಪನಿರ್ದೇಶಕರುಗಳಿಗೆ ಸಮನ್ವಯ ಮಾಡಿ ಎಲ್ಲಾ ಶಿಕ್ಷಕರಿಗೂ ಸಕಾಲದಲ್ಲಿ ಸಂಬಳ ಪಾವತಿಸುವಂತಾಗಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು.